**<u>ಹೆಚ್ಚುವರಿ  ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ರವರ ನ್ಯಾಯಾಲಯ, ಹಾನಗಲ್</u>**

**<u>ಸಿ.ಸಿ ನಂ.1194/2021</u>**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸುನೀಲ ಭೀಮಪ್ಪ ಕಿಳಿಕ್ಯಾತರ | ಪಿಡಬ್ಲ್ಯೂ | 2 |
| ತಂದೇ:ಗಂಡನ ಹೆಸರು | : | ಭೀಮಪ್ಪ | | |
| ವಯಸ್ಸು | : | 38 ವರ್ಷ | | |
| ಉದ್ಯೋಗ | : | ಮುಖ್ಯ ಪೇದೆ, ಹಾನಗಲ್ಲ ಪೊಲೀಸ ಠಾಣೆ | | |
| ವಾಸ ಸ್ಥಳ | : | ಹಾನಗಲ್ಲ | | |

**<u>ದಿನಾಂಕ:17-02-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರ ಅಡಿಯಲ್ಲಿ ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:</u>**

ನಾನು 2022 ರಿಂದ ಇಲ್ಲಿಯವರೆಗೂ ಸಹ ಹಾನಗಲ್ಲ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ಆರೋಪಿಯಾದ ನಾಸಿರ್ ಅಹ್ಮದ್ ತಂದೆ ಜಾಫರ್ ಸಾಬ್ ಘಾಡಪೂಜಿ, ನೂರಾನಿ ಗಲ್ಲಿ ಓಣಿ, ಹಾನಗಲ್ಲರವರ ವಿರುದ್ಧ ನ್ಯಾಯಾಲಯವು ಹೊರಡಿಸಿದ ಉದ್ಘೋಷಣಾ ವಾರಂಟ್ ಅನ್ನು ಜಾರಿಗೊಳಿಸುವ ಸಲುವಾಗಿ ಠಾಣಾಧಿಕಾರಿಯು ನನ್ನನ್ನು ನೇಮಕ ಮಾಡಿದ್ದು, ಆ ಪ್ರಕಾರ ಉದ್ಘೋಷಣಾ ವಾರಂಟ್ ಅನ್ನು ಸ್ವೀಕರಿಸಿ ದಿಃ 03-11-2023 ರಂದು ಆರೋಪಿಯ ವಿಳಾಸಕ್ಕೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಲಾಗಿ ಪತ್ತೆ ಆಗಿರುವುದಿಲ್ಲ. ಈ ಬಗ್ಗೆ ಸ್ಥಳೀಯರನ್ನು ವಿಚಾರಿಸಿದಾಗ ಆರೋಪಿ ತನ್ನ ಮನೆಯವರ ಜೊತೆ ಗಲಾಟೆ ಮಾಡಿಕೊಂಡು ಮನೆ ಬಿಟ್ಟು ಹೋಗಿರುವುದಾಗಿ ತಿಳಿಸಿದರು. ಈ ಬಗ್ಗೆ ತಾರಪ್ಪ ಫಕ್ಕೀರಪ್ಪ ಹುಣಸಿಕಟ್ಟಿ ಮತ್ತು ಸಮೀರಅಹ್ಮದ ನಜೀರಸಾಬ ಶ್ಯಾಡಗುಪ್ಪಿರವರನ್ನು ಪಂಚರಾಗಿ ಬರಮಾಡಿಕೊಂಡು ಆರೋಪಿಯ ಮನೆಯ ಹತ್ತಿರ ಬೆಳಿಗ್ಗೆ 11.00 ರಿಂದ 11.30 ರವರೆಗೆ ಪಂಚನಾಮೆ ಮಾಡಿದೆನು. ಆರೋಪಿಯು ಪತ್ತೆಯಾದಲ್ಲಿ ನ್ಯಾಯಾಲಯಕ್ಕೆ ಅಥವಾ ಹತ್ತಿರದ

ಪೊಲೀಸ್ ಠಾಣೆಗೆ ತಿಳಿಸುವಂತೆ ಟಾಂಟಾಂ ಹೊರಡಿಸಿದ್ದೇನೆ. ಉದ್ಘೋಷಣಾ ವಾರಂಟ್ ನ ಪ್ರತಿಯನ್ನು ಆರೋಪಿಯ ಮನೆಯ ಗೋಡೆಗೆ ಅಂಟಿಸಿರುತ್ತೇನೆ. ನ್ಯಾಯಾಲಯದ ಆದೇಶದಂತೆ ಉದ್ಘೋಷಣಾ ವಾರಂಟ್ ಅನ್ನು ಜಾರಿಗೊಳಿಸಿದ ಬಗ್ಗೆ ನನ್ನ ನಿವೇದನೆಯೊಂದಿಗೆ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ರೀತಿ ಹಾನಗಲ್ಲನ ಪುರಸಭೆಯ ನೋಟೀಸ್ ಬೋರ್ಡ್‌ಗೂ ಸಹ ಒಂದು ಪ್ರತಿಯನ್ನು ಅಂಟಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನೆಯನ್ನು ಈಗ ನೋಡುತ್ತಿದ್ದು, ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಉದ್ಘೋಷಣಾ ವಾರಂಟ್ ಅನ್ನು ನಿ ಪಿ 8 ಎಂದು ಗುರುತಿಸಲಾಯಿತು. ಆ ಮಹಜರನ್ನು ಈಗ ನೋಡುತ್ತಿದ್ದು, ಅದು ನಿಪಿ 9 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಟೋವನ್ನು ಹಾಜರುಪಡಿಸಿದ್ದು, ಅದು ನಿಪಿ 10 ಮತ್ತು ನಿಪಿ 11 ಎಂದು ಗುರುತಿಸಲಾಯಿತು. ಆರೋಪಿಯ ಹೆಸರಿನಲ್ಲಿ ಚರ ಅಥವಾ ಸ್ಥಿರ ಸ್ವತ್ತು ಇಲ್ಲದೇ ಇರುವ ಬಗ್ಗೆ ಮುಖ್ಯಾಧಿಕಾರಿಗಳು ಪುರಸಭೆ ಹಾನಗಲ್ಲರವರು ನೀಡಿದ ದೃಡಿಕರಣ ಪತ್ರವನ್ನು ಹಾಜರುಪಡಿಸಿದ್ದು, ಅದು ನಿಪಿ.12 ಎಂದು ಗುರುತಿಸಲಾಯಿತು.

**:ಪಾಟೀ ಸವಾಲು:** ಇಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ